

> ಕಲೆಯ ಮೂಲಕ ನಾವು ಜಾಗೃತಿ ಮೂಡಿಸಬಹುದು. ಮನಸ್ಸುಗಳ ಜೊತೆಗಿನ ಸಂವಾದಕ್ಕೆ ಕಲೆಯೇ ಪ್ರಬಲವಾದ ಮಾಧ್ಯಮ.

ನಗರಗಳಲ್ಲಿ ಸಿಗುವ ಸಹಾಯ ಸೌಲಭ್ಯಗಳು ಗ್ರಾಮೀಣ ಪ್ರದೇಶಗಳಲ್ಲಿ ಸಿಗ್ತಾ ಇಲ್ಲ ಅನ್ನೋದು ಸತ್ಯ. ಹಾಗಾಗಿ, ಪ್ರತಿಯೊಂದು ಗ್ರಾಮದಲ್ಲಿ ಕೂಡ ಲಿಂಗತ್ವ ಹಾಗೂ ಲೈಂಗಿಕತೆಯ ಕುರಿತಾಗಿನ ಸಂವೇದನಾ ಕೇಂದ್ರವನ್ನು ಮಾಡೋದು ಇವತ್ತಿನ ಅಗತ್ಯ ಅಂತ ನನಗನಿಸತ್ತೆ. ಆಪ್ತಸಮಾಲೋಚನಾ ಘಟಕಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರನ್ನ ಅಥವಾ ಕ್ವೀರ್ ಸಮುದಾಯದವರಲ್ಲದ ಜನರನ್ನು ಕೂಡ ತರಬೇತುಗೊಳಿಸಿ ಈ ಕಾರ್ಯಕ್ಕೆ ನೇಮಿಸಬಹುದು. ಕ್ವೀರ್ ಸಮುದಾಯದವರನ್ನೇ ಪರಿಗಣಿಸಿದರೆ ಅವರು ಈ ವಿಷಯಗಳಲ್ಲಿ ಹೆಚ್ಚು ಸಂವೇದನಾಶೀಲರಾಗಿರುವುದರಿಂದ ಇನ್ನು ಹೆಚ್ಚು ಸಹಾಯ ಆಗಬಹುದು.

◆ **ನಿಮ್ಮ ಮುಂದಿನ ಯೋಜನೆಗಳೇನು?**

ನನಗ್ಯಾರಾದ್ರೂ ಏನು ಮಾಡ್ತೀರಾ ಅಂತ ಕೇಳಿದ್ರೆ ನಾನು ಹೇಳೋದೇನಂದ್ರೆ, ನನಗೆ ಮೂರು ರೀತಿಯ ವೃತ್ತಿಗಳಿವೆ ಅಂತ. ಪ್ರಸ್ತುತ ಕಾರ್ಪೊರೇಟ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿ ಕೆಲಸ ಮಾಡ್ತಾ ಇದೀನಿ. ಅಲ್ಲಿ ಸೋಶಿಯಲ್ ಮೀಡಿಯಾ, ಬ್ರಾಂಡಿಂಗ್ ಮುಂತಾದ ಕೆಲಸಗಳನ್ನು ನಿರ್ವಹಿಸ್ತಾ ಇದ್ದೀನಿ. ಹಾಗಾಗಿ, ಕಾರ್ಪೊರೇಟ್ ವೃತ್ತಿ, ಕಲಾ ವೃತ್ತಿ ಮತ್ತು LGBTQIA ಸಂಬಂಧಿತ ಕೆಲಸಗಳು. ಕಲೆಗೆ ಸಂಬಂಧಿಸಿದಂತೆ ನಾನೀಗ ಬರೀತಾ ಇದೀನಿ. ಒಂದು ಪ್ರಮುಖವಾದ ಬರವಣಿಗೆ ಅನ್ನಬಹುದು. ಹೊಸ ಪ್ರಕಾರ ಅನ್ನಬಹುದು. ಇದರ ಬಗ್ಗೆ ನಾನು ಈಗ ಹೆಚ್ಚೇನು ಹೇಳಲಿಕ್ಕೆ ಸಾಧ್ಯ ಇಲ್ಲ. ಆಮೇಲೆ ಶೋಭನಾ ಅವರ ನಾಟಕವನ್ನು, ಇನ್ನೂ ಹಲವಾರು ಪ್ರದರ್ಶನಗಳನ್ನು ಮಾಡಬೇಕಿದೆ. ಒಂದಿಷ್ಟು ಕಾವ್ಯ ಪ್ರದರ್ಶನಗಳನ್ನು ಕೂಡ ಮಾಡಬೇಕು ಅಂತ ಪ್ಲಾನ್ ಮಾಡ್ತಾ ಇದೀನಿ. ಹೀಗೆ... ತುಂಬಾ ಕೆಲಸ ಇದೆ. ಮಾಡಬೇಕು. ಮಾಡ್ತೀನಿ. ●